ದಿನಾಂಕ 18-12-2019 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದ :

ನಮ್ಮ ಸ್ವಂತ ಊರು ಬಾಳಂಬೀಡ ಗ್ರಾಮ. ಈ ದಾವೆಯನ್ನು ನಮ್ಮ ತಂದೆ ಸಲ್ಲಿಸಿದ್ದರು. ಅವರಿಗೆ ಮಾಹಿತಿ ಇತ್ತು ಅಂದರೆ ನಿಜ. ನನಗೆ ಮಾಹಿತಿ ಇರುವುದಿಲ್ಲಾ ಅಂದರೆ ಸರಿಯಲ್ಲಾ. ಈ ದಾವಾ ಮಾಡುವ ಕರೇಗೌಡ ಕಲಗೌಡರನ್ನು 1 ನೇ ಪ್ರತಿವಾದಿಯನ್ನಾಗಿ ಮಾಡಿದ್ದಾರೆ ಅಂದರೆ ನಿಜ. ಸೋಮೇಶ ಕ್ಷೌರದ ಎನ್ನುವವರನ್ನು 2 ನೇ ಪ್ರತಿವಾದಿಯನ್ನಾಗಿ ಮಾಡಿದ್ದಾರೆ ಅಂದರೆ ನಿಜ. ಶಿಲ್ಪಾ ಮತ್ತು ನಾಗರತ್ನ ಎನ್ನುವವರನ್ನು ಕ್ರಮವಾಗಿ 3 ಮತ್ತು 4 ನೇ ಪ್ರತಿವಾದಿಯರನ್ನಾಗಿ ಮಾಡಿದ್ದಾರೆ ಅಂದರೆ ನಿಜ. 3 ಮತ್ತು 4 ನೇ ಪ್ರತಿವಾದಿಯರು ಯಾವ ಊರಿನಲ್ಲಿ ವಾಸವಾಗಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. ಬಾಳಂಬೀಡ ಗ್ರಾಮದಲ್ಲಿ ವಾಸವಾಗಿರುವುದಿಲ್ಲಾ, 3 ಮತ್ತು 4 ನೇ ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾದ ಬಗ್ಗೆ ನನಗೆ ಗೊತ್ತಿಲ್ಲಾ. 3 ಮತ್ತು 4 ನೇ ಪ್ರತಿವಾದಿಯರು ರಾಣೇಬೆನ್ನೂರಲ್ಲಿ ವಾಸವಾಗಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ನಮ್ಮ ತಂದೆಗೆ ದಾವಾ ಸಲ್ಲಿಸುವಾಗ 3 ಮತ್ತು 4 ನೇ ಪ್ರತಿವಾದಿಯರು ಎಲ್ಲಿ ವಾಸವಾಗಿದ್ದಾರೆ ಅಂತಾ ಗೊತ್ತಿತ್ತು ಅಂದರೆ ಸಾಕ್ಷಿ ಗೊತ್ತಿರಬಹುದು ಅನ್ನುತ್ತಾರೆ. 3 ಮತ್ತು 4 ನೇ ಪ್ರತಿವಾದಿಯರು ಬಾಳಂಬೀಡ ಗ್ರಾಮದಲ್ಲಿ ವಾಸವಾಗಿದ್ದಾರೆ ಅಂತಾ ದಾವೆಯಲ್ಲಿ ಬರೆಯಲಾಗಿದೆ ಅಂದರೆ ನಿಜ. 3 ಮತ್ತು 4 ನೇ ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿಲ್ಲಾ ಅಂದರೆ ಸರಿಯಲ್ಲಾ. 3 ಮತ್ತು 4 ನೇ ಪ್ರತಿವಾದಿಯರು ರಾಣೇಬೆನ್ನೂರಲ್ಲಿ ವಾಸವಾಗಿದ್ದಾರೆ ಅಂತಾ ಗೊತ್ತಿದ್ದರೂ ಸಹ ಬಾಳಂಬೀಡ ಗ್ರಾಮದಲ್ಲಿ ವಾಸವಾಗಿದ್ದಾರೆ ಅಂತಾ ಸುಳ್ಳು ದಾವಾ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲಾ. ನಮ್ಮ ತಂದೆಯು ವಕೀಲರಿಗೆ ಸರಿಯಾದ ಮಾಹಿತಿ ನೀಡದೇ 3 ಮತ್ತು

4 ನೇ ಪ್ರತಿವಾದಿಯರು ಬಾಳಂಬೀಡ ಗ್ರಾಮದಲ್ಲಿ ವಾಸವಾಗಿದ್ದಾರೆ ನ್ಯಾಯಾಲಯದ ಜಾರಿಕಾರರಿಗೆ ಸಮನ್ಸ ಅನ್ನು ಅಂಟಿಸಲು ನಮ್ಮ ತಂದೆ ಹೇಳಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ.

ದಾವಾ ಆಸ್ತಿಯ ಸರ್ವೆ ನಂ.126/2 ಇರುತ್ತದೆ. ಯಲ್ಲಪ್ಪ ರಾಮಣ್ಣ ಬೆಳಗಲಿ ಇವರು ದಿನಾಂಕಃ 28-04-2014 ರಂದು ಮುಖ್ಯ ವಿಚಾರಣಾ ಪ್ರಮಾಣಪತ್ರದ ಖಂಡಿಕೆ-2 ರಲ್ಲಿ ಬೆಳಗಾಲಪೇಟೆ ಗ್ರಾಮದ ಸರ್ವೆ ನಂ.126/2 ಅಂತಾ ಬರೆದಿದ್ದಾರೆ ಅಂದರೆ ನಿಜ. ಅದೇ ರೀತಿ ಶಿವಾನಂದಪ್ಪ ಕ್ಷೌರದ ಇವರೂ ಸಹ ಬೆಳಗಾಲಪೇಟೆ ಗ್ರಾಮದ ಸರ್ವೆ ನಂ.126/2 ಅಂತಾ ಬರೆದಿದ್ದಾರೆ ಅಂದರೆ ನಿಜ ದಾವಾ ಮಾಡುವ ಕಾಲಕ್ಕೆ ಯಲ್ಲಪ್ಪ ರಾಮಣ್ಣ ಬೆಳಗಲಿ , ಶಿವಾನಂದಪ್ಪ ಕ್ಷೌರದ ಮತ್ತು ಶಾಂತಪ್ಪ ಉಮ್ಮಣ್ಣನವರು ಇವರು ನಮ್ಮ ತಂದೆಗೆ ಆತ್ಮೀಯರು ಅಂದರೆ ಸರಿಯಲ್ಲಾ. 3 ಮತ್ತು 4 ನೇ ಪ್ರತಿವಾದಿಯರಿಗೆ ನ್ಯಾಯಾಲಯದಿಂದ ಸಮನ್ಸ ಜಾರಿಯಾಗಿ ರುವುದಿಲ್ಲಾ ಅಂದರೆ ನನಗೆ ಗೊತ್ತಿಲ್ಲಾ. ಆದ್ದರಿಂದ ದಾವೆಯು ಊರ್ಜಿತವಾಗುವುದಿಲ್ಲಾ ಅಂದರೆ ಸರಿಯಲ್ಲಾ. ದಾವಾ ಆಸ್ತಿಯು ಮೂಲತಃ ಹೊನ್ನಪ್ಪ ಎನ್ನುವವರಿಗೆ ಸೇರಿದ್ದು ಅಂದರೆ ನನಗೆ ಗೊತ್ತಿಲ್ಲಾ. ಹೊನ್ನಪ್ಪ ಎ್ನವವರಿಗೆ ಪರಮಣ್ಣ, 2) ಸೋಮಣ್ಣ 3) ಮಲ್ಲಪ್ಪ 4) ಚನ್ನಬಸಪ್ಪ ಎನ್ನುವ ನಾಲ್ಕು ಜನ ಮಕ್ಕಳು ಅಂದರೆ ನನಗೆ ಗೊತ್ತಿಲ್ಲಾ. ಚನ್ನಬಸಪ್ಪನ ಹೆಂಡತಿ ಬಸವ್ವ ಅಂತಾ ಇದ್ದು ಅವರ ಮಗಳು ಶಾಂತವ್ವ ಅಂತಾ ಇದ್ದಾರೆ ಅಂದರೆ ನಿಜ. ಬಸವ್ವ ಮತ್ತು ಅವರ ಮಗಳಾದ ಶಾಂತವ್ವ ಎನ್ನುವವರು ಹಿಸ್ಸೆ ಕೋರಿ ಹಾನಗಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂ.130/1986 ನ್ನು ಸಲ್ಲಿಸಿದ್ದರು ಅಂದರೆ ನನಗೆ ಗೊತ್ತಿಲ್ಲಾ. ಸದರಿ ದಾವೆಯಲ್ಲಿ ರಾಜಿ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲಾ. ರಾಜಿ ಪ್ರಕಾರ ಬಸವ್ವ ಮತ್ತು ಅವರ ಮಗಳಾದ ಶಾಂತವ್ವ ಇವರಿಗೆ ಸರ್ವೆ ನಂ.126/1 ಎ ರಲ್ಲಿ ಕ್ಷೇತ್ರ 04 ಎಕರೆ ಮತ್ತು ಸರ್ವೆ ನಂ.126/2 ರಲ್ಲಿ 03 ಎಕರೆ 27 ಗುಂಟೆ ಜಮೀನು ಬಂದಿರುತ್ತದೆ ಅಂದರೆ ನಿಜ. ಎರಡೂ ಜಮೀನುಗಳು ಬಾಳಂಬೀಡ

ಗ್ರಾಮದಲ್ಲಿ ಇರುತ್ತವೆ ಅಂದರೆ ನಿಜ. ಮೂಲ ಪುರುಷ ಹೊನ್ನಪ್ಪನ ಮೊದಲ ಮಗ ಪರಮಣ್ಣನಿಗೆ ರಾಮಣ್ಣ ಮತ್ತು ಸಹದೇವಪ್ಪ ಎನ್ನುವ ಇಬ್ಬರು ಮಕ್ಕಳು ಇದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಸದರಿ ರಾಮಣ್ಣ ಮತ್ತು ಸಹದೇವಪ್ಪ ಇವರು ಅಸಲು ದಾವಾ ನಂ.130/1986 ರಲ್ಲಿ 1 ಮತ್ತು 2 ನೇ ಪ್ರತಿವಾದಿಯಾರಾಗಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಸೋಮಣ್ಣನ ಮಗ ದ್ಯಾಮಣ್ಣ ಇವರು ಆ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿದ್ದ ಅಂದರೆ ನನಗೆ ಗೊತ್ತಿಲ್ಲಾ. ದ್ಯಾಮಣ್ಣನ ಹೆಂಡತಿ ಬಸವ್ವ ಎನ್ನುವವರು ಇದ್ದರು ಅಂದರೆ ನನಗೆ ಗೊತ್ತಿಲ್ಲಾ. ದ್ಯಾಮಣ್ಣನ ಮಗನೇ ಮೂಖಪ್ಪ ದ್ಯಾಮಣ್ಣ ಕ್ಷೌರದ ಎನ್ನುವವರು 2 ನೇ ಪ್ರತಿವಾದಿಯ ತಂದೆ ಅಂದರೆ ನಿಜ. ಮೂಖಪ್ಪನ ಮಗ ಸೋಮೇಶ ಎನ್ನುವವರು ಈ ದಾವೆಯ 2 ನೇ ಪ್ರತಿವಾದಿ ಅಂದರೆ ನಿಜ. ಚನ್ನಬಸಪ್ಪ ಮತ್ತು ಬಸವ್ವ ಇವರಿಗೆ ಶಾಂತವ್ವ ಎನ್ನುವ ಒಬ್ಬಳೇ ಮಗಳು ಇದ್ದಾಳೆ ಅಂದರೆ ನಿಜ. ಬಸವ್ವ ಮತ್ತು ಆಕೆಯ ಮಗಳು ಶಾಂತವ್ವ ಇಬ್ಬರೂ ಅರಳೇಶ್ವರ ಗ್ರಾಮದಲ್ಲಿ ವಾಸವಾಗಿದ್ದರು ಅಂದರೆ ನಿಜ. ದಾವಾ ಆಸ್ತಿಯನ್ನು ಶಾಂತವ್ವಳೇ ಸಾಗುವಳಿ ಮಾಡುತ್ತಿದ್ದಳು ಅಂದರೆ ಸರಿಯಲ್ಲ. ನಮ್ಮ ತಂದೆಗೆ ಕೊಟ್ಟಿದ್ದಳು. 2 ನೇ ಪ್ರತಿವಾದಿಯು ಶಾಂತವ್ವಳ ಮೊಮ್ಮಗ ಅಂದರೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಯ ಕುರಿತು ಶಾಂತವ್ವ ಎನ್ನುವವರು 2 ನೇ ಪ್ರತಿವಾದಿಗೆ ಮೃತ್ಯುಪತ್ರ ಬರೆದುಕೊಟ್ಟಿದ್ದಾರೆ ಅಂದರೆ ಸರಿಯಲ್ಲ ಅರಳೇಶ್ವರ ಗ್ರಾಮದಲಿ ಶಾಂತವ್ವಳಿಗೆ ಒಂದು ಮನೆ ಮತ್ತು ಖುಲ್ಲಾ ಜಾಗೆ ಇತ್ತು ಅಂದರೆ ನಿಜ. ಸದರಿ ಆಸ್ತಿಯು ಅಂದರೆ ವಿಪಿಸಿ ನಂ.430 ಇದು ಶಾಂತವ್ವಳ ಗಂಡನ ಆಸ್ತಿ ಅಂದರೆ ನನಗೆ ಗೊತ್ತಿಲ್ಲಾ. ವಿಪಿಸಿ ನಂ.430 ನ್ನು ವಿಜಯಲಕ್ಷ್ಮಿ ಶೇಖರಗೌಡ ಪಾಟೀಲ ಮತ್ತು ಶೇಖರಗೌಡ ಶಿವನಗೌಡ ಪಾಟೀಲ ಇವರು ಖೊಟ್ಟಿಯಾಗಿ ಪಂಚಾಯತಿ ದಾಖಲು ಮಾಡಿಕೊಂಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿಯು ಅರಳೇಶ್ವರ ಗ್ರಾಮದವನು ಇರುತ್ತಾನೆ. ಈ ದಾವೆಯನ್ನು ನಡೆಸಲು 1 ನೇ ಪ್ರತಿವಾದಿ ನನಗೆ ಮಾಹಿತಿ ಕೊಟ್ಟಿದ್ದಾನೆ ಅಂದರೆ ಸರಿಯಲ್ಲಾ. ಒಟ್ಟು

ಮೊಕ್ತಿಯಾರ ಪತ್ರವನ್ನು 1 ನೇ ಪ್ರತಿವಾದಿ ಮಾಡಿಸಿಕೊಟ್ಟಿದ್ದಾನೆ ಅಂದರೆ ಸರಿಯಲ್ಲಾ. ಉಳಿದ ವಾದಿಯರಿಗೆ ಒಟ್ಟು ಮೊಕ್ತಿಯಾರ ಪತ್ರದ ಬಗ್ಗೆ ಮಾಹಿತಿ ಇರುವುದಿಲ್ಲಾ ಅಂದರೆ ಸರಿಯಲ್ಲಾ ದಾವಾ ಆಸ್ತಿಯನ್ನು ಮೃತ್ಯುಪತ್ರದ ಪ್ರಕಾರ 2 ನೇ ಪ್ರತಿವಾದಿಯ ಹೆಸರಿಗೆಖಾತೆ ವರ್ಗಾವಣೆ ಮಾಡುವಂತೆ ಹಾನಗಲ ತಹಶೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಆ ಬಗ್ಗೆ ಹಾನಗಲ ತಹಶೀಲ್ದಾರ್ ಅವರು ಒಂದು ತಿಂಗಳ ನೋಟೀಸನ್ನು ಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ನಮ್ಮ ಊರಿನಲ್ಲಿ ಯಾವುದೇ ತಕರಾರು ಬಂದಿರುವುದಿಲ್ಲ ಎಂದು 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತಾ ವರ್ಗಾವಣೆ ಮಾಡಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಆ ಕುರಿತು 2 ನೇಪ್ರತಿವಾದಿಯ ಹೆಸರಿಗೆ ಎಂ ಆರ್ ನಂ.ಹೆಚ.–38/2013 ಮಂಜೂರಾಗಿದೆ ಅಂದರೆ ನನಗೆ ಗೊತ್ತಿಲ್ಲಾ. ಎಂ ಆರ್ ನಂ.ಹೆಚ.38/2013 ರ ಪ್ರಕಾರ 2 ನೇ ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಾಗಿದೆ ಅಂದರೆ ನನಗೆ ಗೊತ್ತಿಲ್ಲಾ. ನಾನು ಖಾತಾ ವರ್ಗಾವಣೆ ಆಗುವಾಗ ತಹಶೀಲ್ದಾರ ಅವರಿಗೆ ತಕರಾರು ಕೊಟ್ಟಿದ್ದಾರೋ ಇಲ್ಲವೋ ಅಂತಾ ನಮ್ಮ ತಂದೆಗೆ ಗೊತ್ತಿದೆ. 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತಾ ವರ್ಗಾಣೆಯಾದ ನಂತರ 1 ನೇ ಪ್ರತಿವಾದಿಯು ಮಾನ್ಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಸವಣೂರ ಮೇಲ್ಮನವಿ ಸಲ್ಲಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಅದರ ಆರ್ ಟಿ ಎಸ ನಂ.156/2013–14 ಅಂದರೆ ನನಗೆ ಗೊತ್ತಿಲ್ಲಾ. ಆ ಮೇಲ್ಮನವಿಯಲ್ಲಿ ಎಂ ಆರ್ ನಂ.ಹೆಚ.38/2013 ಮೃತ್ಯುಪತ್ರ ನೊಂದಣಿ ಯಾಗಿರುವುದಿಲ್ಲಾ ಅಂತಾ ರದ್ದಾಯಿತು ಅಂದರ ನನಗೆ ಗೊತ್ತಿಲ್ಲಾ. 2 ನೇ ಪ್ರತಿವಾದಿಯು ಸದರಿ ಆದೇಶದ ವಿರುದ್ಧ ಜಿಲ್ಲಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಸದರಿ ಮೇಲ್ಮನವಿಯಲ್ಲಿ 92/2014–15 ವಾರಸಾ ಪ್ರಕಾರ ಖಾತಾ ಮಾಡುವಂತೆ ಹಾನಗಲ್ ತಹಶೀಲ್ದಾರ್ ಅವರಿಗೆ ಮೇಲ್ಮನವಿ ಸಲ್ಲಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ